P.W.1

ದಿನಾಂಕ 28-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ:** ಶ್ರೀ ಎನ್.ಆರ್.ಎನ್ ವಕೀಲರಿಂದಃ

ವೈದ್ಯರಿಗೆ ಹಣ ಸಂದಾಯ ಮಾಡಿದ ಬಗ್ಗೆ 7 ರಶೀದಿಗಳನ್ನು ನಿ.ಪಿ.12 ರಿಂದ ನಿ.ಪಿ.18 ಎಂದು ಗುರುತಿಸಲಾಯಿತು,

**ಪಾಟಿ ಸವಾಲುಃ** ಶ್ರೀ ಎ.ಎನ್.ಟಿ ವಕೀಲರಿಂದಃ

ಮೋಟಾರ ಸೈಕಲ್ ಚಾಲನೆ ಮಾಡಲು ನಾನು ಚಾಲನಾ ಪರವಾನಿಗೆಯನ್ನು ಹೊಂದಿರುತ್ತೇನೆ. ಚಾಲನಾ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ಪೋಲಿಸರಿಗೆ ದೂರನ್ನು ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ಅಪಘಾತ ಸ್ಥಳದ ಪಂಚನಾಮೆಯನ್ನು ಆನಂದು ದಾಮೋದರ ನಾಯ್ಕ ಮತ್ತು ಇತರೇಯವರ ಸಮಕ್ಷಮ ಮಾಡಿರುತ್ತಾರೆ. ನನ್ನ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿರುವುದಿಲ್ಲ. ಪೋಲಿಸರಿಗೆ ಅಪಘಾತದ ಸ್ಥಳವನ್ನು ಪುಟ್ಟು ಮಾರುತಿ ನಾಯ್ಕ ತೋರಿಸಿರುತ್ತಾರೆ. ಅಪಘಾತವಾದ ಸ್ಥಳದಲ್ಲಿ ರಸ್ತೆಯು ಉತ್ತರ ದಕ್ಷಿಣವಾಗಿ ಇರುತ್ತದೆ. ಕಂಚಿನಬಟ್ಟಿ ಡೊಂಗ್ರಿ ರಸ್ತೆಯು ಪೂರ್ವ ಪಶ್ಚಿಮವಾಗಿ ಇರುತ್ತದೆ. ಆ ದಿನ ನಾನು ಡೊಂಗ್ರಿಯಿಂದ ಅಂಕೋಲಾಗೆ ಬರುತ್ತಿದ್ದೇನು. ಅಪಘಾತವಾದ ಸ್ಥಳದ ಸುತ್ತಮುತ್ತ ಅರಣ್ಯ ಇರುತ್ತದೆ. ಸದರಿ ರಸ್ತೆಯು ಯಲ್ಲಾಪುರ ಅಂಕೋಲಾ ರಸ್ತೆ ಆಗಿರುವುದಿಲ್ಲ. ಅಪಘಾತವಾದ ಸ್ಥಳದ ರಸ್ತೆಯು ಡಾಂಬರ ರಸ್ತೆ ಇರುತ್ತದೆ. ಎರಡು ದೊಡ್ಡ ವಾಹನಗಳು ಅಕ್ಕಪಕ್ಕದಲ್ಲಿ ಹೋಗುವ ಜಾಗದಷ್ಟು ಅಳತೆಯಷ್ಟು ರಸ್ತೆಯು ಅಗಲ ಇರುತ್ತದೆ. ಡಾಂಬರ ರಸ್ತೆಯ ಎರಡು ಬದಿಗಳಲ್ಲಿ ಸುಮಾರು 3 ಅತಿ ಅಗಲದ ಮಣ್ಣಿನ ರಸ್ತೆ ಇರುತ್ತದೆ. ಕೆಲವು

ಸಂದರ್ಭಗಳಲ್ಲಿ ಡಾಂಬರ ರಸ್ತೆಯಲ್ಲಿ ಸ್ಥಳವಕಾಶ ಲಭ್ಯವಿರದಿದ್ದಲ್ಲಿ ವಾಹನವನ್ನು ಮಣ್ಣಿನ ರಸ್ತೆಯಲ್ಲಿ ಇಳಿಸಿಕೊಂಡು ಹೋಗಬಹುದು. ಸದರಿ ರಸ್ತೆಯ ಮಧ್ಯಭಾಗದಲ್ಲಿ ಬಿಳಿ ಪಟ್ಟಿ ಇರಲಿಲ್ಲ.

2. ಅಪಘಾತವಾದ ಸ್ಥಳದಲ್ಲಿ ರಸ್ತೆಯು ತಿರುವಿನಿಂದ ಕೂಡಿರುತ್ತದೆ. ಡೊಂಗ್ರಿಗೆ ಹೋಗುವಾಗ ರಸ್ತೆಯ ಎಡಗಡೆ ಭಾಗಕ್ಕೆ ತಿರುವು ಇರುತ್ತದೆ. ಅಪಘಾತವಾದ ಸ್ಥಳದಲ್ಲಿ ರಸ್ತೆಯಲ್ಲಿ ಯಾವುದೇ ತಿರುವು ಇರುವುದಿಲ್ಲ, ನೇರವಾಗಿ ಇರುತ್ತದೆ ಎಂದರೆ ಸರಿಯಲ್ಲ. ಕಾಚಿನಬಟ್ಟಿ ಕಡೆಯಿಂದ ಕಾರು ಬರುತ್ತಿತ್ತು. ನೂರು ಮೀಟರ ದೂರದಲ್ಲಿ ಕಾರು ಬರುವುದನ್ನು ನಾನು ಗಮನಿಸಿದೇನು. ಕಾರು ರಸ್ತೆಯ ಪಶ್ಚಿಮ ದಿಕ್ಕಿನಲ್ಲಿ ಬರುತ್ತಿತ್ತು ಎಂದರೆ ಸರಿ. ಆ ಸಮಯದಲ್ಲಿ ನಾನು ರಸ್ತೆಯ ಮಧ್ಯಭಾಗದಲ್ಲಿ ಮೋಟಾರ ಸೈಕಲನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದೇನು ಎಂದರೆ ಸರಿಯಲ್ಲ. ರಸ್ತೆಯ ಅಗಲ ಸುಮಾರು 15 ಅಡಿ ಇರಬಹುದು. ರಸ್ತೆಯ ಪಶ್ಚಿಮ ಅಂಚಿನಿಂದ ಎಷ್ಟು ದೂರದಲ್ಲಿ ನಾನು ಮೋಟಾರ ಸೈಕಲನಲ್ಲಿ ಹೋಗುತ್ತಿದ್ದೇನು ಎನ್ನುವ ಪ್ರಶ್ನೆಗೆ ಸಾಕ್ಷಿಯು ರಸ್ತೆಯ ಪೂರ್ವ ಅಂಚಿನಿಂದ 2-3 ಅಡಿ ಅಂತರದಲ್ಲಿ ಹೋಗುತ್ತಿದ್ದೇನು ಎಂದು ನುಡಿಯುತ್ತಾರೆ. ರಸ್ತೆಯ ಪಶ್ಚಿಮದ ಗಡಿಯಿಂದ ನಾನು 7 ಅಡಿ ಅಂತರದಲ್ಲಿ ಹೋಗುತ್ತಿದ್ದೇನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಮುಂದೆ ಹಾಗೂ ಹಿಂದೆ ಬೇರೆ ಯಾವುದೇ ವಾಹನಗಳು ಬರುತ್ತಿರಲಿಲ್ಲ. ಅಪಘಾತವಾದಾಗ ಮಧ್ಯಾಹ್ನ 3-45 ಘಂಟೆಯಾಗಿತ್ತು.

3. ಅಪಘಾತವಾದ 15 ನಿಮಿಷಗಳ ನಂತರ ಪುಟ್ಟು ಮಾರುತಿ ನಾಯ್ಕು ರವರು ಸ್ಥಳಕ್ಕೆ ಬಂದು ನನ್ನನ್ನು ಎಬ್ಬಿಸಿದರು. ಆ ನಂತರ ಅಪಘಾತ ಸ್ಥಳಕ್ಕೆ ಯಾರು ಬಂದರು ಎಂದು ನನಗೆ ಗೊತ್ತಿಲ್ಲ. ಮಹೇಶ ದಾಮೋದರ ನಾಯ್ಕು ಅಪಘಾತವಾದ ಕೂಡಲೇ ಬಂದಿದ್ದು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ತಲೆಗೆ ಬಲವಾದ ಹೊಡೆತ ಬಿದ್ದುದರಿಂದ ನನಗೆ ಯಾವುದರ ಪರಿವೇ

ಇರಲಿಲ್ಲ ಎಂದು ನುಡಿಯುತ್ತಾರೆ.ಮಹೇಶ ದಾಮೋದರ ನಾಯ್ಕ ಮತ್ತು ನನ್ನ ಇತರೇ ಸಂಬಂಧಿಕರು ನನ್ನನ್ನು ಅಪಘಾತವಾದ ನಂತರ ಆಸ್ಪತ್ರೆಗೆ ಸೇರಿಸಿದ್ದರು ಎನ್ನುವ ವಿಚಾರ ನಾನು ಆಸ್ಪತ್ರೆಯಿಂದ ಮನೆಗೆ ಬಂದ ನಂತರ ನನಗೆ ತಿಳಿಯಿತು. ಆ ದಿನ ನಾನು ಮೋಟಾರ ಸೈಕಲನ್ನು ಅತಿವೇಗವಾಗಿ ನಿರ್ಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಹೋಗಿ ಕಾರಿನ ಬಲ ಭಾಗಕ್ಕೆ ಡಿಕ್ಕಿ ಮಾಡಿ ಅಪಘಾತವನ್ನುಂಟು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಧಿಕೃತವಾದ ಪರವಾನಿಗೆ ಮೋಟಾರ ಸೈಕಲ ಚಾಲನೆ ಮಾಡಲು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ನಿಲರ್ಕ್ಷ್ಯತನದಿಂದ ಚಾಲನೆಯಿಂದ ಆಗಿರುತ್ತದೆ, ಕಾರಿನ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ.ನನ್ನ ತಪ್ಪಿನಿಂದ ಅಪಘಾತವಾದರೆ ಪರಿಹಾರ ಬರುವುದಿಲ್ಲವೆಂದು ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಶ್ರೀ ಎ.ಎನ್.ಟಿ ವಕೀಲರ ವಿನಂತಿಯ ಮೇರೆಗೆ ಮುಂದುವರಿದ ಪಾಟಿ ಸವಾಲನ್ನು ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.